ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಮುಂಬಡ್ತಿ ಪ್ರಾತಿನಿಧ್ಯ ಪ್ರಮಾಣಗಳ ಬಗ್ಗೆ

ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

304 (412) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ಮುಂಬಡ್ತಿ ಮೀಸಲಾತಿ ಆದೇಶದ ರೀತ್ಯಾ ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರಿಗೆ ನೀಡಿರುವ ಪ್ರಾತಿನಿಧ್ಯದ ಪ್ರಮಾಣವೆಷ್ಟು ;

(ಆ) ಪ್ರಾತಿನಿಧ್ಯದಲ್ಲಿ ಸಾಮಾನ್ಯ ವರ್ಗದ ಪ್ರಾತಿನಿಧ್ಯ ಪ್ರಮಾಣ ಶೇ 82 ರಷ್ಟನ್ನು ಮೀರಿದ್ದಲ್ಲಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಪ್ರಾತಿನಿಧ್ಯ ಪ್ರಮಾಣ ಶೇಕಡ 18ನ್ನು ಮೀರಿದ್ದಲ್ಲಿ ದಿನಾಂಕ 30-08-1979 ಅಥವಾ 13.04.1999ರ ಆದೇಶಗಳ ರೀತ್ಯಾ ರೋಸ್ಟರ್ ಬಿಂದುಗಳನ್ನು/ ಪ್ರಾತಿನಿಧ್ಯ ಪ್ರಮಾಣವನ್ನು ಹೇಗೆ ಅನುಸರಿಸಬೇಕು ;

(ಇ) ಯಾವುದೇ ವರ್ಗದ ನೌಕರರ ಪ್ರಾತಿನಿಧ್ಯ ಪ್ರಮಾಣ ನಿಗದಿಪಡಿಸಿದ್ದಕ್ಕಿಂತ ಹೆಚ್ಚಾಗಿದ್ದಲ್ಲಿ ರೋಸ್ಟರ್ ಅನುಸರಿಸಬಹುದೆ ಅಥವಾ ಯಾವ ಕ್ರಮಗಳನ್ನು ಅನುಸರಿಸಬೇಕು ? (ಪೂರಕ ಆದೇಶಗಳನ್ನು ಒದಗಿಸುವುದು)